Dada 571109

## ಜಿಲ್ಲಾಧಿಕಾರಿಗಳು ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರ ನಡವಳಿ

ವಿಷಯ: ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಸೋಮಹಳ್ಳಿ ಗ್ರಾಮದ ಸ.ನಂ: 146 ರಲ್ಲಿ 23 ಗುಂಟೆ ಜಮೀನಿನ ಪೈಕಿ 2 ಗುಂಟೆ ಜಮೀನನ್ನು ಬಿ.ಎಸ್.ಎನ್.ಎಲ್ 4ಜಿ ತಂತ್ರಜ್ಞಾನಕ್ಕೆ ಟವರ್ ನಿರ್ಮಾಣದ ಉದ್ದೇಶಕ್ಕಾಗಿ ಕಾಯ್ದಿರಿಸುವ ಬಗ್ಗೆ.

ಉಲ್ಲೇಖ:1. ಪ್ರಧಾನ ವ್ಯವಸ್ಥಾಪಕರು, ಭಾರತ ಸಂಚಾರ ನಿಗಮ ನಿಯಮಿತ, ಮೈಸೂರು ವ್ಯವಹಾರ ಕ್ಷೇತ್ರ, ಮೈಸೂರು ರವರ ಪತ್ರದ ಸಂಖ್ಯೆ: Plg/USOF/4G Saturation Project/2022-23/02 ದಿನಾಂಕ: 04.10.2022 ಮತ್ತು 22.12.2022

2. ತಹಶೀಲ್ದಾರ್, ಗುಂಡ್ಲುಪೇಟೆ ತಾಲ್ಲೂಕು ರವರ ಪತ್ರದ ಸಂಖ್ಯೆ: ಎಲ್.ಎನ್.ಡಿ(1)ಸಿ.ಆರ್: 25/2022-23 ದಿನಾಂಕ: 17.04.2023

**ಪ್ರಸ್ತಾವನೆ:**

ಉಲ್ಲೇಖ(1)ರ ಕೋರಿಕೆಯಂತೆ ಉಲ್ಲೇಖ(2)ರ ತಹಶೀಲ್ದಾರ್ ರವರ ವರದಿಯಂತೆ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಸೋಮಹಳ್ಳಿ ಗ್ರಾಮದ ಸ.ನಂ: 146 ರಲ್ಲಿ 23 ಗುಂಟೆ ಜಮೀನಿದ್ದು, ಸರ್ಕಾರಿ ಖರಾಬು ಎಂದು ನಮೂದಾಗಿರುತ್ತದೆ, ಈ ಜಾಗಕ್ಕೆ ಗ್ರಾಮಸ್ಥರಿಂದ ಯಾವುದೇ ತಂಟೆ ತಕರಾರು ಇರುವುದಿಲ್ಲ. ಅದರಂತೆ ಸದರಿ ಜಮೀನು ಬಿ.ಎಸ್.ಎನ್.ಎಲ್ 4ಜಿ ತಂತ್ರಜ್ಞಾನಕ್ಕೆ ಟವರ್ ಸ್ಥಾಪಿಸುವ ಉದ್ದೇಶಕ್ಕೆ ಸೂಕ್ತವಾದ ಜಾಗವಾಗಿದ್ದು, ಸದರಿ ಜಾಗವನ್ನು ಬಿ.ಎಸ್.ಎನ್.ಎಲ್ 4ಜಿ ತಂತ್ರಜ್ಞಾನಕ್ಕೆ ಟವರ್ ನಿರ್ಮಾಣಕ್ಕಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಸೆಕ್ಷನ್ 71 ರೀತ್ಯಾ ಕಾಯ್ದಿರಿಸಲು ದಾಖಲಾತಿಗಳೊಂದಿಗೆ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧವಾಗಿ ಗುಂಡ್ಲುಪೇಟೆ ತಾಲ್ಲೂಕು ಹಂಗಳ ಹೋಬಳಿ ಸೋಮಹಳ್ಳಿ ಗ್ರಾಮದ ಸ.ನಂ: 146 ರಲ್ಲಿ 23 ಗುಂಟೆ ಜಮೀನಿನ ಪೈಕಿ 2 ಗುಂಟೆ ಜಮೀನನ್ನು ಬಿ.ಎಸ್.ಎನ್.ಎಲ್ 4ಜಿ ತಂತ್ರಜ್ಞಾನಕ್ಕೆ ಟವರ್ ನಿರ್ಮಾಣಕ್ಕಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಸೆಕ್ಷನ್ 71 ರೀತ್ಯಾ ಕಾಯ್ದಿರಿಸಲು ದಾಖಲಾತಿಗಳೊಂದಿಗೆ ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಪ್ರಸ್ತಾಪಿತ ಉದ್ದೇಶಕ್ಕೆ ಕಾಯ್ದಿರಿಸುವುದು ಸೂಕ್ತವಾಗಿರುತ್ತದೆ ಎಂದು ಮನಗಂಡು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸಂಖ್ಯೆ- CRDC-REV0LND 1/103/2023-REV SEC-DC-CHN ದಿನಾಂಕ :03.05.2023

**'ಆದೇಶ'**

ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಸೋಮಹಳ್ಳಿ ಗ್ರಾಮದ ಸ.ನಂ: 146 ರಲ್ಲಿ 23 ಗುಂಟೆ ಜಮೀನಿನ ಪೈಕಿ 2 ಗುಂಟೆ ಜಮೀನನ್ನು ಬಿ.ಎಸ್.ಎನ್.ಎಲ್ 4ಜಿ ತಂತ್ರಜ್ಞಾನಕ್ಕೆ ಟವರ್ ನಿರ್ಮಾಣದ ಉದ್ದೇಶಕ್ಕಾಗಿ ಪ್ರಧಾನ ವ್ಯವಸ್ಥಾಪಕರು, ಭಾರತ ಸಂಚಾರ ನಿಗಮ ನಿಯಮಿತ, ಮೈಸೂರು ವ್ಯವ ಹಾರ ಕ್ಷೇತ್ರ, ಮೈಸೂರು ಇವರಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 71ರ ರೀತ್ಯಾ ಕಾಯ್ದಿರಿಸಿ ಆದೇಶಿಸಿದೆ. ಈ ಬಗ್ಗೆ ಕಂದಾಯ ದಾಖಲೆಗಳಲ್ಲಿ ಇಂಡೀಕರಿಸಲು ತಹಶೀಲ್ದಾರ್ ಗುಂಡ್ಲುಪೇಟೆ ತಾಲ್ಲೂಕು ರವರಿಗೆ ಆದೇಶಿಸಿದೆ ಈ ಕೆಳಕಂಡಂತೆ ಷರತ್ತುಗಳನ್ನು ವಿಧಿಸಿದೆ.

**'ಷರತ್ತುಗಳು'**

1. ಕಾಯ್ದಿರಿಸಿರುವ ಜಮೀನನ್ನು ಕಾಯ್ದಿರಿಸಿದ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
2. ಕಾಯ್ದಿರಿಸಿರುವ ಜಮೀನನ್ನು ಕಾಯ್ದಿರಿಸಿದ ಉದ್ದೇಶಕ್ಕೆ 02 ವರ್ಷದೊಳಗೆ ಬಳಸಿಕೊಳ್ಳತಕ್ಕದ್ದು.
3. ಕಾಯ್ದಿರಿಸಿದ ಜಮೀನನ್ನು ಬಿ.ಎಸ್.ಎನ್.ಎಲ್ 4ಜಿ ತಂತ್ರಜ್ಞಾನಕ್ಕೆ ಟವರ್ ಎಂದು ನಾಮಫಲಕ ಅಳವಡಿಸುವುದು.
4. ಬಿ.ಎಸ್.ಎನ್.ಎಲ್ 4ಜಿ ತಂತ್ರಜ್ಞಾನಕ್ಕೆ ಟವರ್ ನಿರ್ಮಾಣಕ್ಕಾಗಿ ಕಾಯ್ದಿರಿಸಿರುವ ಜಮೀನನ್ನು ಸಂಬಂಧಿಸಿದ ಇಲಾಖೆಗೆ ಹಸ್ತಾಂತರಿಸಿ, ಸಂಬಂಧಿಸಿದ ತಹಶೀಲ್ದಾರ್ ರವರು ಈ ಕಛೇರಿಗೆ ವರದಿ ಮಾಡುವುದು.

ಸಹಿ/-

ಜಿಲ್ಲಾಧಿಕಾರಿ,

ಪ್ರತಿಯನ್ನು :

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.

ಮಾನ್ಯ ಪ್ರಾದೇಶಿಕ ಆಯುಕ್ತರು ಮೈಸೂರು ವಿಭಾಗ, ಮೈಸೂರು ರವರ ಅವಗಾಹನೆಗೆ ಸಲ್ಲಿಸಿದೆ.

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ ರವರ ಮಾಹಿತಿಗಾಗಿ ಕಳುಹಿಸಿದೆ.

ಪ್ರಧಾನ ವ್ಯವಸ್ಥಾಪಕರು, ಭಾರತ ಸಂಚಾರ ನಿಗಮ ನಿಯಮಿತ, ಮೈಸೂರು ವ್ಯವಹಾರ ಕ್ಷೇತ್ರ, ಮೈಸೂರು ಇವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ತಹಶೀಲ್ದಾರ್ ಗುಂಡ್ಲುಪೇಟೆ ತಾಲ್ಲೂಕು ರವರಿಗೆ ಅಗತ್ಯ ಕ್ರಮಕ್ಕಾಗಿ ರವಾನಿಸುತ್ತಾ ಸದರಿ ಆದೇಶವನ್ನು ಆರ್ ಟಿಸಿಯಲ್ಲಿ ಇಂದೀಕರಿಸಿ ಆರ್ ಟಿಸಿ ಪ್ರತಿಯೊಂದಿಗೆ ವರದಿಯನ್ನು ಸಲ್ಲಿಸಲು ಸೂಚಿಸಿದೆ,

ಕಛೇರಿ ಕಡತಕ್ಕೆ.

ಜಿಲ್ಲಾಧಿಕಾರಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.